ಅಸಲು ದಾವಾ ಸಂಖ್ಯೆ236/2023

ಪಿ ಡಬ್ಲ್ಯೂ: 1

**ಮಧ್ಯಂತರ ಅರ್ಜಿ ಸಂಖ್ಯೆ7 ರ ಆದೇಶದ ಮೇರೆಗೆ ದಿನಾಂಕ 12.01.2026 ರಂದು ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ – ವಾದಿಗಳ ಪರ ಶ್ರೀ ಎನ್ ಆರ್ ಕೆ ವಕೀಲರಿಂದಃ**

ಅಸಲು ದಾವಸಂಖ್ಯೆ 119/2025ರ ಆದೇಶ ಪುಟ, ವಾದ ಪತ್ರ, ಮೂರು ಪ್ರತಿವಾದ ಪತ್ರಗಳು, ತೀರ್ಪು ಮತ್ತು ಡಿಕ್ರಿಗಳ ದೃಡೀಕೃತ ನಕಲುಗಳನ್ನು ಕ್ರಮವಾಗಿ ನಿಪಿ–1 ರಿಂದ ನಿಪಿ– 7 ಎಂದು ಗುರುತಿಸಲಾಯಿತು. ಆರ್ ಎ 9/2012ರ ತೀರ್ಪು ಮತ್ತು ಡಿಕ್ರಿಯ ದೃಡೀಕೃತ ನಕಲುಗಳನ್ನು ಕ್ರಮವಾಗಿ ನಿಪಿ–8 ಮತ್ತು ನಿಪಿ– 9 ಎಂದು, ಎಫ್ ಡಿ ಪಿ 2/2014ರ ಆದೇಶ ಪುಟ, ಆದೇಶ, ಅಂತಿಮ ಡಿಕ್ರಿಗಳ ದೃಡೀಕೃತ ನಕಲುಗಳನ್ನು ಕ್ರಮವಾಗಿ ನಿಪಿ–10 ರಿಂದ ನಿಪಿ–12 ಎಂದು, ನ್ಯಾಯಾಲಯದ ನಿಯೋಗಿಯ ವರದಿ, ಸ್ಕೆಚ್, ಮಹಜರ್, ನೋಟೀಸ್, ಸದರಿ ನ್ಯಾಯಾಲಯದ ನಿಯೋಗಿಯು ಸಲ್ಲಿಸಿರುವ ವರದಿಗೆ ಸಲ್ಲಿಸಿರುವ ತಕರಾರಿನ ದೃಡೀಕೃತ ನಕಲುಗಳನ್ನು ಒಟ್ಟಾಗಿ ನಿಪಿ–13 ಎಂದು, ವಾಸದ ಮನೆಗೆ ಸಂಬಂಧಿಸಿದ ನ್ಯಾಯಾಲಯದ ನಿಯೋಗಿಯ ವರದಿ, ಸ್ಕೇಚ್ ಗಳು, ಮಹಜರ್, ನೋಟೀಸ್, ಅಂಚೆ ಸ್ವೀಕೃತಿ ಮತ್ತು ಆದೇಶಿಕೆಯ ದೃಡೀಕೃತ ನಕಲುಗಳನ್ನು ಒಟ್ಟಾರೆಯಾಗಿ ನಿಪಿ–14 ಎಂದು , ದಿನಾಂಕಃ 30.10.2017ರ ನೋಂದಾಯಿತ ದಾನಪತ್ರದ ದೃಡೀಕೃತ ನಕಲನ್ನು ನಿಪಿ–15 ಎಂದು, ನನ್ನ ತಾಯಿ ನಿಂಗರಾಜಮ್ಮರವರ ಮರಣ ಪ್ರಮಾಣಪತ್ರವನ್ನು ನಿಪಿ–16 ಎಂದು ಗುರುತಿಸಲಾಯಿತು. ಸರ್ವೆ ನಂಬರ್ 27/1ರ ಪಹಣಿ ಪತ್ರಿಕೆಯನ್ನು ನಿಪಿ–17 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ